

بسم اللهِ الرّحمٰن الرّحيم

# ನಮ್ಮ ವಾಸ್ತವಿಕ ಧ್ಯೇಯ ವಚನ – "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್"

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್, ಅವರು ಲಂಡನ್‌ನ 'ಬೈತುಲ್ ಫುತೂಹ್' ಮಸೀದಿಯಲ್ಲಿ 09-05-14 ರಂದು ನೀಡಿದ ಜುಮುಅ ಖುತುಬದ ಸಾರಾಂಶ)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

**"ಮುಹಬ್ಬತ್ ಸಬ್ ಕೆ ಲಿಯೆ ನಫ್‌ರತ್ ಕಿಸೀಸೆ ನಹೀಂ."** – ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ. ನಾವು ಈ ಧ್ಯೇಯವಾಕ್ಯವನ್ನು ವಿಶಿಷ್ಟವಾಗಿ ಅನ್ಯರ ಮುಂದೆ ಇರಿಸುತ್ತೇವೆ. ಅಹ್ಮದಿಯಾ ಜಮಾಅತ್ ಅಥವಾ ಅದರ ಸದಸ್ಯರು ಅನ್ಯರ ಬಗ್ಗೆ ಕೆಲವು ರೀತಿಯ ವಿದ್ವೇಷ ಹೊಂದಿದ್ದಾರೆ ಎಂಬ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲಿಕ್ಕಾಗಿ ಅಥವಾ ಅದಕ್ಕೆ ಉತ್ತರವಾಗಿ ನಾವು ಈ ಘೋಷಣೆಯನ್ನು ಜನರ ಮುಂದಿಡುತ್ತೇವೆ. ಅದೇ ರೀತಿ ಇಸ್ಲಾಂ ಧರ್ಮವು ಪ್ರೀತಿ ಮತ್ತು ಸೌಹಾರ್ದವನ್ನು ಉಪದೇಶಿಸುತ್ತದೆ ಎಂದೂ ಅನ್ಯರ ಭಾವನೆಗಳಿಗೆ ಗಮನ ಹರಿಸಲು ಹೇಳುತ್ತದೆ ಎಂದೂ ಮುಸ್ಲಿಮೇತರರಿಗೆ ತಿಳಿಸಿಕೊಡಲಿಕ್ಕಾಗಿ ನಾವು ಅವರ ಮುಂದೆ ಸಹ ಈ ಧ್ಯೇಯವಾಕ್ಯ ಪ್ರಸ್ತಾಪಿಸುತ್ತೇವೆ. ಆ ಮೂಲಕ ಇಸ್ಲಾಮ್ ದೌರ್ಜನ್ಯ ಮತ್ತು ಬರ್ಬರ ವರ್ತನೆಯನ್ನು ಪ್ರತಿಪಾದಿಸುವುದಿಲ್ಲ ಎಂದು ನಾವು ಸ್ಪಷ್ಟಪಡಿಸುತ್ತೇವೆ. ಅಂತೆಯೇ ನಾವು ಪರಸ್ಪರ ಸಹ ದ್ವೇಷದ ಗೋಡೆಗಳನ್ನು ಕೆಡವಿ ಹಾಕಿ ಪ್ರೀತಿಯಿಂದ ವರ್ತಿಸುತ್ತೇವೆಂದೂ ಮುಂದೆ ಸಹ ಹಾಗೆಯೇ ವರ್ತಿಸುವೆವು ಎಂದು ಸೂಚಿಸಲಿಕ್ಕಾಗಿಯೂ ನಾವು ಈ ಘೋಷಣೆ ಕೂಗುತ್ತೇವೆ.

ನಾವು ಯಾವುದಾದರೂ ರೀತಿಯಲ್ಲಿ ಮಾನವರ ಸೇವೆ ಮಾಡುವುದು, ನಾವು ಇಸ್ಲಾಮಿನ ಪ್ರಚಾರ ಮಾಡುವುದು ನಾವು ಲೋಕದ ಪ್ರತಿಯೊಬ್ಬ ಮನುಷ್ಯನನ್ನು ಪ್ರೀತಿಸುತ್ತಿರುವುದರಿಂದಲೇ ಆಗಿದೆ. ನಾವು ಪ್ರತಿಯೊಬ್ಬರ ಹೃದಯದಿಂದ ದ್ವೇಷದ ಬೀಜವನ್ನು ಕಿತ್ತೆಸೆಯಲು ಬಯಸುತ್ತೇವೆ. ಹಾಗೂ ಅದರಲ್ಲಿ ಪ್ರೀತಿಯ ಗಿಡವನ್ನು ನೆಡಲು ಬಯಸುತ್ತೇವೆ. ಇವುಗಳನ್ನು ಮಾಡುವುದು ಏಕೆ? ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಮಗೆ ಹೀಗೆ ಮಾಡಲು ಕಲಿಸಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ರಾತ್ರಿಗಳಲ್ಲಿ ಲೋಕದ ಹಿತಕ್ಕೋಸ್ಕರ ಕೊರಗುತ್ತಾ ಇದ್ದುದನ್ನು ನಾವು ಕಂಡ ಕಾರಣದಿಂದಲೂ ಆಗಿದೆ. ಅವರು ದುಃಖಿಸುತ್ತಾ ತಮ್ಮ ಸಾಷ್ಟಾಂಗ ಪ್ರಣಾಮಗಳಲ್ಲಿ ಅತ್ತು ಅತ್ತು ಪ್ರಾರ್ಥಿಸುತ್ತಿದ್ದರು. ಈ ವಿಷಯವನ್ನು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಪ್ರತಿಪಾದಿಸಿರುವನು. ದ್ವೇಷಾಸೂಯೆಗಳಿಂದ ಮುಕ್ತರಾದ ಜನರಿಗೆ ಪುನರುತ್ಥಾನದ ತನಕ ಸಾಕ್ಷ್ಯಾಧಾರವಾಗಿ ಈ ಉಲ್ಲೇಖಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಸಂರಕ್ಷಿಸಿರುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವಿರುದ್ಧ ದೋಷಾರೋಪ ಮಾಡುವವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಲೋಕದ ಜನರ ಬಗ್ಗೆ ಹೊಂದಿದ್ದ ಸಹಾನುಭೂತಿಯ ಈ ವರ್ತನೆಯನ್ನು ಪರಿಶೀಲಿಸಬೇಕೆಂದು ಅಲ್ಲಾಹನು ಬಯಸಿರುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಸಂಬಂಧ ಹೊಂದಿರುವುದಾಗಿ ಹೇಳಿಕೊಳ್ಳುವ ಮುಸ್ಲಿಮರು ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಈ ನಡವಳಿಕೆಯನ್ನು ಮಾದರಿಯಾಗಿ ಇಟ್ಟುಕೊಳ್ಳಬೇಕೆಂದು ಅಲ್ಲಾಹನು ಇಚ್ಛಿಸಿರುವನು.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು:

**ಫಲಅಲ್ಲಕ ಬಾಖಿಉನ್ ನಫ್‌ಸಕ ಅಲಾ ಆಸಾರಿಹಿಮ್ ಅನ್ ಲಮ್ ಯೂಮಿನೂ ಬಿ ಹಾಝುಲ್ ಹದೀಸಿ ಅಸಫ**

ಅರ್ಥ: ಅವರು ಈ ವಿಷಯದ ಬಗ್ಗೆ ವಿಶ್ವಾಸ ಹೊಂದದ ಕಾರಣ ದುಃಖಿತನಾಗಿ ನೀನು ನಿನ್ನ ಜೀವನವನ್ನು ನಾಶಗೊಳಿಪೆಯಾ?

ಈ ವಚನದಲ್ಲಿ ಯಾರನ್ನು ಉದ್ದೇಶಿಸಿ ಹೇಳಲಾಗಿದೆಯೋ ಅವರು 'ವಿಶ್ವಾಸ ಹೊಂದದೆ' ಇರುವ ವಿಷಯ ಯಾವುದು? ಬಹುದೇವಾರಾಧನೆ ಮಾಡಬೇಡಿರಿ ಎಂದು ಅವರೊಡನೆ ಹೇಳಲಾಗಿತ್ತು. ಆಗ ಅವರು ಅದನ್ನು ನಂಬಲಿಲ್ಲ. ಅವರೊಂದಿಗೆ ಹೇಳಲಾಗಿತ್ತು– ನೀವು ದೇವನಿಗೆ ಪುತ್ರನಿರುವನೆಂದು ಹೇಳಬೇಡಿರಿ. ಬಹುದೇವಾರಾಧನೆ ಎಂತಹ ಪಾಪವೆಂದರೆ ಅಲ್ಲಾಹನು ಅದನ್ನು ಕ್ಷಮಿಸಲಾರನು ಎಂದು ಹೇಳಿರುವನು. ಆದುದರಿಂದ ಪ್ರತಿಯೊಬ್ಬ ಮನುಷ್ಯನ ಬಗ್ಗೆ ಸಹಾನುಭೂತಿಯನ್ನು ಪ್ರಕಟಿಸಲಾಗಿದೆ. ಎಷ್ಟರವರೆಗೆಂದರೆ, ಬಹುದೇವಾರಾಧಕನೂ ಕೂಡ ನೇರಮಾರ್ಗವನ್ನು ಅವಲಂಬಿಸುವಂತಾಗಲು ಸಾಧ್ಯವಿರುವಷ್ಟು ಪ್ರಯತ್ನ ಮಾಡಬೇಕೆಂದು ಸೂಚಿಸಲಾಗಿದೆ. ಪ್ರಯತ್ನದೊಂದಿಗೆ ಪ್ರಾರ್ಥನೆ ಸಹ ಮಾಡಬೇಕೆಂದು ಹೇಳಲಾಗಿದೆ.

ಅಹ್ಮದಿಯರು **"ಎಲ್ಲರೊಂದಿಗೆ ಪ್ರೀತಿ"** ಎಂಬ ಧ್ಯೇಯವಾಕ್ಯದ ಫಲವನ್ನು ಗಳಿಸಬೇಕಾದರೆ, ನಾವು ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಡೆವಳಿಕೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ನಾವು ನಮ್ಮ ಏಕದೇವ ವಿಶ್ವಾಸದ ಮಟ್ಟ ಹೇಗಿವೆ ಎಂದು ಅಳೆದು ನೋಡುವಾಗ ಮಾತ್ರ ಇದು ಸಾಧ್ಯವಾಗುವುದು. ಪ್ರೀತಿ ಮತ್ತು ಸಹಾನುಭೂತಿ ಪ್ರಕಟಣೆಯ ಇನ್ನೊಂದು ಉದಾಹರಣೆ ಹೀಗಿದೆ: ಯಾವುದಾದರೂ ಸಮುದಾಯದ ದೌರ್ಜನ್ಯ ಮಿತಿಮೀರಿಹೋದರೆ, ಅವರ ನಾಶಕ್ಕೋಸ್ಕರ ಪ್ರಾರ್ಥಿಸುವುದಕ್ಕೆ ಬದಲಾಗಿ, "ಓ ನನ್ನ ಅಲ್ಲಾಹ್, ನನ್ನ ಸಮುದಾಯದ ಜನರಿಗೆ ಸರಿಯಾದ ಮಾರ್ಗದರ್ಶನ ನೀಡು; ನಾನು ಅವರೊಂದಿಗೆ ಹೇಳುತ್ತಿರುವುದು ಅವರ ಒಳಿತಿಗೋಸ್ಕರವಾಗಿದೆ ಎಂದು ಅವರು ಅರಿತುಕೊಳ್ಳುವುದಿಲ್ಲ." ಎಂದು ಪ್ರಾರ್ಥಿಸುತ್ತಾರೆ. ಒಂದು ಗೋತ್ರದ ಜನರು ಇನ್ನೊಂದು ಗೋತ್ರದ ವಿರುದ್ಧ ಪ್ರಾರ್ಥಿಸಲು ಒತ್ತಾಯಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಕೈ ಎತ್ತಿ ಪ್ರಾರ್ಥಿಸಿದಾಗ ಜನರು ಭಾವಿಸಿದರು ಈಗ ನಾಶಕ್ಕೋಸ್ಕರ ಪ್ರಾರ್ಥಿಸಲಾಗಿದೆ ಎಂದು. ಆದರೆ ಆಗ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ಪ್ರಾರ್ಥಿಸಿದರು:

**"ಓ ಅಲ್ಲಾಹ್ ನೀನು ಅಹ್ಲೆದೌಸ್ ಗೋತ್ರದ ಜನರಿಗೆ ಮಾರ್ಗದರ್ಶನ ನೀಡು"**

ಆದುದರಿಂದ ಪ್ರೀತಿ ಎಂದರೆ ಕೇವಲ ತನ್ನವರೊಂದಿಗೆ ಪ್ರೀತಿ ಮತ್ತು ಹಿತೈಷಿ ಭಾವನೆ ಮಾತ್ರ ಅಲ್ಲ ಅನ್ಯರೊಂದಿಗೆ ಸಹ ಪ್ರೀತಿ ಮತ್ತು ಸಹಾನುಭೂತಿ ಇರಬೇಕು. ಇದೇ ನಡೆವಳಿಕೆ ಮಟ್ಟದಿಂದ ಇದೇ ರೀತಿಯ ನೋವು ಹೊಂದುವುದರಿಂದ ಏಕದೇವ ವಿಶ್ವಾಸ ಸ್ಥಾಪಿತವಾಗುವುದು. ಲೋಕವು ನಾಶದಿಂದ

ರಕ್ಷಿಸಲ್ಪಡುವುದು. ಈಗ ಲೋಕದಲ್ಲಿ ಸಾವಿರಾರು ವಿಧಗಳ ಬಹುದೇವಾರಾಧನೆ ಹಬ್ಬಿದೆ. ಬಹುದೇವಾರಾಧನೆ ಮಾತ್ರವಲ್ಲ ದೇವನ ಅಸ್ತಿತ್ವವನ್ನೇ ಲೋಕದ ಬಹಳ ದೊಡ್ಡ ಒಂದು ಭಾಗ ನಿರಾಕರಿಸುತ್ತಿದೆ. ಆದುದರಿಂದ ದೇವರಾಜ್ಯವನ್ನು ಸ್ಥಾಪಿಸಲು ಮತ್ತು ಏಕದೇವಾರಾಧನೆಯನ್ನು ಸ್ಥಾಪಿಸಲು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಮಗೆ ನೀಡಿದ ಮಾದರಿಯನ್ನು ಅನುಸರಿಸಿ ವರ್ತಿಸುವುದು ಆವಶ್ಯಕವಾಗಿದೆ. ನಾವು ಒಂದು ಧ್ಯೇಯವಾಕ್ಯ ಘೋಷಿಸಿದೆವು. ಅದನ್ನು ಲೋಕವು ಇಷ್ಟಪಟ್ಟಿತು. ವಿವಿಧ ಸ್ಥಳಗಳಲ್ಲಿ ನಮ್ಮನ್ನು ಹೊಗಳಲಾಗುತ್ತಿದೆ ಎನ್ನುವುದರ ಬಗ್ಗೆ ಮಾತ್ರ ನಾವು ಸಂತೋಷಗೊಂಡರೆ ಸಾಲದು. ಈ ಧ್ಯೇಯವಾಕ್ಯ ಒಂದು ವಿಶಾಲವಾದ ಉದ್ದೇಶ ಲಕ್ಷ್ಯವನ್ನು ತಲಪಲು ಇರುವ ಒಂದು ಮಾರ್ಗ ಮಾತ್ರವಾಗಿದೆ ಎಂದು ನೆನಪಿಡಬೇಕು. ಆ ಉದ್ದೇಶ ಲಕ್ಷ್ಯವನ್ನು ತಲಪಲು ಮನುಷ್ಯನನ್ನು ಸೃಷ್ಟಿಸಲಾಗಿದೆ. ಮನುಷ್ಯರೊಡನಿರುವ ನಮ್ಮ ಸಹಾನುಭೂತಿಯು ನಾವು ಪ್ರೀತಿಯ ಪ್ರಚಾರವನ್ನು ಮಾಡಬೇಕು ಮತ್ತು ದ್ವೇಷದಿಂದ ದೂರವಿರಬೇಕು ಎಂದು ನಮ್ಮನ್ನು ಪ್ರೇರೇಪಿಸುತ್ತದೆ. ದ್ವೇಷದಿಂದ ದೂರವಿದ್ದರೆ ಮಾತ್ರ ಸಾಲದು. ದ್ವೇಷವನ್ನು ದ್ವೇಷಿಸಬೇಕು. ಅಲ್ಲಾಹನ ಪ್ರೀತಿಯನ್ನು ಗಳಿಸಲು ಮತ್ತು ಅವನ ಏಕದೇವ ವಿಶ್ವಾಸವನ್ನು ಸ್ಥಾಪಿಸಲು ನಾವು ಯಾರ ಬಗ್ಗೆಯಾದರೂ ದ್ವೇಷ ಹೊಂದುವುದಾದರೆ ಅದು ಆ ವ್ಯಕ್ತಿಯ ಬಗ್ಗೆ ಅಲ್ಲ. ಆ ವ್ಯಕ್ತಿಯ ಶೈತಾನೀ ಕೆಲಸವನ್ನು ನಾವು ದ್ವೇಷಿಸುವುದರಿಂದಾಗಿದೆ. ಅಂತಹ ದ್ವೇಷ ನಾವು ಹೊಂದಲೇ ಬೇಕಾಗಿದೆ. ಆದುದರಿಂದ ನಾವು ಲೋಕದ ಜನರ ದೃಷ್ಟಿಯಲ್ಲಿ ಮೆಚ್ಚುಗೆ ಪಡೆದವರಾಗಲು ಮಾತ್ರ ಧ್ಯೇಯವಾಕ್ಯ ಉಚ್ಚರಿಸುವವರಾಗಬಾರದು. ನಾವು ನಮ್ಮ ಉದ್ದೇಶ ಲಕ್ಷ್ಯವನ್ನು ತಲಪಲಿಕ್ಕಾಗಿ ಧ್ಯೇಯವಾಕ್ಯ ಘೋಷಿಸುವವರಾಗಬೇಕು. ಈ ಕಾಲಘಟ್ಟದಲ್ಲಿ ನಾವು ಅದೃಷ್ಟಶಾಲಿಗಳಾಗಿದ್ದೇವೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನ ಪ್ರೀತಿಯನ್ನು ಗಳಿಸಲು, ಲೋಕದ ಜನರ ಬಗ್ಗೆ ಹಿತೈಷಿಗಳಾಗಲು, ಪ್ರೀತಿಯ ತತ್ವವನ್ನು ಪಾಲಿಸಲು ನಮ್ಮನ್ನು ಆಯ್ಕೆ ಮಾಡಿದರು ಮತ್ತು ಅವರು ಆ ತತ್ವಗಳನ್ನು ನಮಗೆ ಉಪದೇಶಿಸಿದರು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳುತ್ತಾರೆ:

''ಧರ್ಮದ ಪರಿಪೂರ್ಣ ಭಾಗಗಳು ಎರಡು ಮಾತ್ರ. ಒಂದು ಭಾಗ ದೇವನನ್ನು ಪ್ರೀತಿಸುವುದಾಗಿದೆ. ಇನ್ನೊಂದು ಅವನ ಸೃಷ್ಟಿಗಳೊಂದಿಗೆ ಪ್ರೀತಿಯನ್ನು ಹೊಂದುವುದಾಗಿದೆ. ಆ ಪ್ರೀತಿ ಎಷ್ಟರಮಟ್ಟಿಗಿರಬೇಕೆಂದರೆ ಅನ್ಯರ ಕಷ್ಟವನ್ನು ತನ್ನ ಕಷ್ಟದಂತೆ ಭಾವಿಸಬೇಕು ಮತ್ತು ಅವರಿಗೋಸ್ಕರ ಪ್ರಾರ್ಥನೆ ಮಾಡಬೇಕು.''

ಕೆಲವು ಸಮಯದಿಂದ ನಾನು ನೋಡುತ್ತಿದ್ದೇನೆ– ಮಾನವರ ಸೇವೆಗೋಸ್ಕರ ನಾವು ಸ್ಥಾಪಿಸಿರುವ **'ಹ್ಯುಮೇನಿಟಿ ಫಸ್ಟ್'** ಎಂಬ ಸಂಸ್ಥೆಯಲ್ಲಿ ಕೆಲಸಮಾಡುವವರು ಪ್ರಾಯಶಃ ಹೀಗೆ ಭಾವಿಸುತ್ತಿದ್ದಾರೆ. ತಮ್ಮ ಕೆಲಸವನ್ನು ಧರ್ಮದಿಂದ ಸಂಪೂರ್ಣವಾಗಿ ಬೇರ್ಪಡಿಸಿ ಸೇವೆಯನ್ನು ಮಾಡಬೇಕು. ಹಾಗೆ ಮಾಡಿದರೆ ಲೋಕದಲ್ಲಿ ನಮ್ಮ ಬಗ್ಗೆ ಮೆಚ್ಚುಗೆ ವರ್ಧಿಸುವುದು ಎಂದು. ನಾನು ಇಲ್ಲಿನ ಕೇಂದ್ರ ನಿರ್ವಾಹಕರೊಂದಿಗೆ ಹೇಳಿದೆ: ನೀವು ಧರ್ಮದೊಂದಿಗೆ ಜೋಡಿಸಲ್ಪಟ್ಟ ಕಾರಣದಿಂದಲೇ ನಿಮಗೆ ಮಹತ್ವ ದೊರೆತಿದೆ. ನಮ್ಮ ಜಮಾಅತಿನ ಹೆಸರು ಒಂದಲ್ಲ ಒಂದು ಕಡೆ ಪ್ರಸ್ತಾಪಿಸಲ್ಪಡುತ್ತದೆ. ಎಲ್ಲಿಯಾದರೂ ಜಮಾಅತಿನ ಹೆಸರು ಹೇಳಬೇಕಾಗಿ ಬಂದರೆ ಹಾಗೆ ಹೇಳುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ಆದರೆ, ನಾವು ಅಲ್ಲಾಹನ ಸಂಪ್ರೀತಿ ಗಳಿಸಲು ಮಾನವರ ಸೇವೆಯನ್ನು ಮಾಡುತ್ತೇವೆ ಎಂಬ ಭಾವನೆ ಯಾವಾಗಲೂ ನಿಮ್ಮಲ್ಲಿರಬೇಕು. ಜನರ ಹಕ್ಕುಗಳನ್ನು ನೀಡಬೇಕೆಂದು ಅಲ್ಲಾಹನು ಆಜ್ಞಾಪಿಸಿರುವ ಕಾರಣ ನಾವು ಹೀಗೆ ವರ್ತಿಸುತ್ತೇವೆ ಎಂಬ ಭಾವನೆ ಸದಾ ನಿಮ್ಮಲ್ಲಿರಬೇಕು. ಅಲ್ಲಾಹನ ಸಂಪ್ರೀತಿ ಗಳಿಸಲು, ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಬೇಕಾದುದು ಮತ್ತು ಆರಾಧನೆಗಳನ್ನು ಸಂರಕ್ಷಿಸಬೇಕಾದುದು ಅತ್ಯಂತ ಆವಶ್ಯಕವಾಗಿದೆ. ಇವು ಇಲ್ಲವಾದರೆ ಮಾನವರ ಸೇವೆಯಿಂದ ಪ್ರಯೋಜನ ಸಿಗಲಾರದು.

**ಹ್ಯುಮೇನಿಟಿ ಫಸ್ಟ್‌ನ** ಇಲ್ಲಿನ ಕಾರ್ಯಕರ್ತರಿಗೆ ನನ್ನ ಮಾತುಗಳು ಅರ್ಥವಾದುವು. ಇತರ ದೇಶಗಳಲ್ಲಿರುವ ಹ್ಯುಮೇನಿಟಿ ಫಸ್ಟ್ ಕಾರ್ಯಕರ್ತರೊಂದಿಗೆ– ಅವರು ಬಹುತೇಕ ಅಹ್ಮದಿಯರೇ ಆಗಿದ್ದಾರೆ– ಅವರೊಂದಿಗೆ ನಾನು ಹೇಳಲು ಬಯಸುವುದೇನೆಂದರೆ ನೀವು ಅಲ್ಲಾಹನೊಂದಿಗೆ ನಿಮಗಿರುವ ಸಂಬಂಧವನ್ನು ಬಲಪಡಿಸಿದರೆ ಮಾತ್ರ ನಿಮ್ಮ ಕೆಲಸದಲ್ಲಿ ಅನುಗ್ರಹ ಸುರಿಸಲ್ಪಡುವುದು. ನೀವು ಅಲ್ಲಾಹನಿಂದ ಅನುಗ್ರಹ ಗಳಿಸುವ ರೀತಿಯಲ್ಲಿ ನಿಮ್ಮ ಕೆಲಸಗಳನ್ನು ಮಾಡಿರಿ. ನಿಮ್ಮ ಕೆಲಸಗಳನ್ನು ಪ್ರಾರ್ಥನೆ ಮಾಡಿ ಆರಂಭಿಸಿರಿ. ಹೀಗೆ ಮಾಡದಿದ್ದರೆ ನಮ್ಮ ಯಾವ ಕೆಲಸದಲ್ಲೂ ಅನುಗ್ರಹ ಸಿಗಲಾರದು. ಎಷ್ಟು ಬುದ್ಧಿವಂತಿಕೆಯಿಂದ ನೀವು ಯೋಜನೆಗಳನ್ನು ರೂಪಿಸಿದರೂ ಸಹ.

ಈ ವಿಷಯದ ಬಗ್ಗೆ ಪ್ರಸ್ತಾಪಿಸಬೇಕಾದುದು ಆವಶ್ಯಕವಾಗಿದ್ದ ಕಾರಣ ನಾನು ಈ ಮಾತುಗಳನ್ನು ವಿಶದೀಕರಿಸಿರುವೆನು.

**''ಎಲ್ಲರೊಂದಿಗೆ ಪ್ರೀತಿ''** ಎಂಬ ಧ್ಯೇಯವಾಕ್ಯದ ಕಡೆಗೆ ಪುನಃ ಬರುತ್ತೇನೆ. ನಾನು ಸ್ಪಷ್ಟಪಡಿಸಲು ಬಯಸುವುದೇನೆಂದರೆ ಮಾನವರ ಸೇವೆ, ಮಾನವರೊಂದಿಗೆ ಸಹಾನುಭೂತಿ, ಪ್ರೀತಿಯನ್ನು ಹರಡುವುದು, ಹಗೆತನವನ್ನು ನಿವಾರಿಸುವುದು ಇವು ಅತಿ ದೊಡ್ಡ ಸತ್ಕರ್ಮವೇ ಆಗಿದೆಯೆಂಬುದರಲ್ಲಿ ಸಂಶಯವಿಲ್ಲ. ಆದರೆ, ಈ ಧ್ಯೇಯವಾಕ್ಯವೇ ನಮ್ಮ ಜೀವಿತದ ಪರಮ ಲಕ್ಷ್ಯ ಎಂದು ಭಾವಿಸಬಾರದು. ನಾವು ಹೀಗೆ ಮಾಡಿದರೆ ಎಲ್ಲವನ್ನೂ ಗಳಿಸಿದಂತೆ ಆಗುತ್ತದೆ ಎಂದು ಭಾವಿಸಬಾರದು. ಈ ಧ್ಯೇಯವಾಕ್ಯ ನಮ್ಮ ಉನ್ನತ ಉದ್ದೇಶ ಲಕ್ಷ್ಯವನ್ನು ಗಳಿಸುವ ಒಂದು ಮಾರ್ಗ ಮಾತ್ರವಾಗಿದೆ. ಆ ಉದ್ದೇಶ ಲಕ್ಷ್ಯವನ್ನು ಗಳಿಸಲು ಸಾಗುವ ಒಂದು ಹೆಜ್ಜೆ ಮಾತ್ರವಾಗಿದೆ. ಅದನ್ನು ಜನರಿಗೆ ಕಲಿಸಲಿಕ್ಕಾಗಿಯೇ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಆಗಮಿಸಿದರು. ಅವರ ಗುಲಾಮರಾಗಿ ಈ ಕಾಲಘಟ್ಟದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕಳುಹಿಸಲ್ಪಟ್ಟರು. ಅಲ್ಲಾಹನ ಏಕತ್ವದ ಸರಿಯಾದ ಜ್ಞಾನವನ್ನು ಜನರಲ್ಲಿ ಉಂಟುಮಾಡುವುದೇ ಆ ಪರಮ ಲಕ್ಷ್ಯವಾಗಿದೆ. ಅಲ್ಲಾಹನ ಎಲ್ಲಾ ಆಜ್ಞೆಗಳನ್ನು ಅನುಸರಿಸಿ ನಡೆಯಲು ಪ್ರಯತ್ನಿಸಬೇಕಾಗಿದೆ. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಡೆವಳಿಕೆಗಳನ್ನು ನಮ್ಮ ಉದ್ದೇಶ ಲಕ್ಷ್ಯವನ್ನಾಗಿ ಮಾಡಬೇಕು. ಹಾಗೆ ವರ್ತಿಸಲು ನಮ್ಮ ಸಕಲ ಸಾಮರ್ಥ್ಯಗಳನ್ನು ಬಳಸಬೇಕು. ಇದರ ಮೂಲಕ ಮಾತ್ರವೇ ಅತ್ಯುನ್ನತ ನೈತಿಕ ಗುಣಗಳು ಮತ್ತು ಒಳಿತುಗಳು ಗಳಿಸಲು ಸಾಧ್ಯವಾಗುವುದು. ಯಾವುದಾದರೂ ಉತ್ತಮ ಧ್ಯೇಯ ವಚನವನ್ನು ಅನುಸರಿಸಿ ವರ್ತಿಸುವುದು ಉತ್ತಮವೇ ಆಗಿದೆ. ಕೆಲವು ಧ್ಯೇಯವಾಕ್ಯಗಳು ಪರಸ್ಪರ ಸಮವಾಗಿರುತ್ತವೆ. ಉದಾಹರಣೆಗೆ 'ಅಲ್ಲಾಹನನ್ನು ಅನುಸರಿಸಿರಿ' ಮತ್ತು 'ಒಳ್ಳೆಯ ಕೆಲಸವನ್ನು ಹೆಚ್ಚು ಹೆಚ್ಚಾಗಿ ಮಾಡಿರಿ' ಎಂಬ ಧ್ಯೇಯವಾಕ್ಯಗಳು ಸಮಾನ ಅರ್ಥ ಹೊಂದಿವೆ. ಏಕೆಂದರೆ ಅಲ್ಲಾಹನನ್ನು ಅನುಸರಿಸದೆ ಒಳ್ಳೆಯ ಕೆಲಸಗಳಲ್ಲಿ ಮುಂದೆ ಸಾಗಲು ಸಾಧ್ಯವೇ ಇಲ್ಲ. ಅದೇ ರೀತಿ ಒಳ್ಳೆಯವನಾಗದವನು ಅಲ್ಲಾಹನನ್ನು ಅನುಸರಿಸುವವನಾಗಲಾರ. ಇನ್ನೊಂದು ಧ್ಯೇಯವಾಕ್ಯ ''ನಾನು ಧರ್ಮಕ್ಕೆ ಲೌಕಿಕ ಕೆಲಸಗಳ ಮೇಲೆ ಆದ್ಯತೆ ನೀಡುವೆನು'' ಮತ್ತು ''ನಾನು ಒಳ್ಳೆಯ ಕೆಲಸ ಮಾಡಲು ಸ್ಪರ್ಧಿಸುವೆನು'' ಇವೆರಡು ಧ್ಯೇಯವಾಕ್ಯಗಳು ಸಮಾನವಾಗಿವೆ. ಒಂದು ಇನ್ನೊಂದರ ಭಾಗವಾಗಿರುತ್ತದೆ. ಒಟ್ಟಿನಲ್ಲಿ ಎಲ್ಲಾ ಒಳ್ಳೆಯ ಕೆಲಸಗಳೂ ಒಳಿತುಗಳಾಗಿವೆ. ನಾವು ಅವುಗಳನ್ನು ಗಳಿಸಲು ಪ್ರಯತ್ನಿಸಬೇಕು ಆದರೆ ಧ್ಯೇಯವಾಕ್ಯದ ಪ್ರಶ್ನೆ ಬರುವಾಗ ಕೆಲವು ಜನರು ಅದರ ಕಡೆಗೆಯೇ ಗಮನಿಸಿ ತಮ್ಮ ಗಮನವನ್ನು ಅದಕ್ಕೆ ಮಾತ್ರ ಸೀಮಿತಗೊಳಿಸುತ್ತಾರೆ. ಅವರು ತಮ್ಮ ಒಳ್ಳೆಯ ಕೆಲಸಗಳನ್ನೂ ಈ ಧ್ಯೇಯವಾಕ್ಯವನ್ನೂ ಎಲ್ಲದಕ್ಕೂ ಸಾಕು

ಎಂದು ಭಾವಿಸಲು ತೊಡಗುತ್ತಾರೆ. ಉದಾಹರಣೆಗೆ ನಮ್ಮ ಕೆಲವು ಯುವಕರು ಮತ್ತು ಇತರರು ಸಹ ತಮ್ಮ ಧಾರ್ಮಿಕ ಸ್ಥಿತಿ ಏನೆಂಬುದನ್ನು ಮರೆತು ಬಿಟ್ಟಿದ್ದಾರೆ. ಆದರೆ ಲೋಕದ ಜನರಿಗೆ ತೋರಿಸಲು ''ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ'' ಎಂಬ ಘೋಷಣೆಯನ್ನು ಕೂಗುತ್ತಾ ಇರುತ್ತಾರೆ. ಇಸ್ಲಾಮಿನ ಪ್ರಚಾರವನ್ನು ಉತ್ತಮ ಸಂಕಲ್ಪದೊಂದಿಗೆ ಮಾಡಲು ಈ ಧ್ಯೇಯವಾಕ್ಯವನ್ನು ಉಪಯೋಗಿಸುವುದು ಉತ್ತಮವೇ ಆಗಿದೆ. ಆದರೆ ಇದು ಮಾತ್ರ ನಮ್ಮ ಉದ್ದೇಶ ಲಕ್ಷ್ಯವಲ್ಲ. ನಮ್ಮ ಉದ್ದೇಶಲಕ್ಷ್ಯ ಬಹಳ ವಿಶಾಲವಾಗಿದೆ. ಮಾನವರ ಸೇವೆ ಮಾಡುವುದು ಉತ್ತಮವೇ ಆಗಿದೆ. ಆದರೆ, ಅಲ್ಲಾಹನ ನೆನಪು ಹೃದಯಗಳಿಂದ ಮಾಯವಾಗುತ್ತಾ ಇದ್ದು ಮಾನವರ ಸೇವೆಯಲ್ಲಿ ಮಾತ್ರ ನಾವು ಮಗ್ನರಾದರೆ ಪ್ರಯೋಜನ ಸಿಗಲಾರದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಕಥೆ ಬರೆದಿದ್ದಾರೆ. ಅದು ಹೀಗಿದೆ. ಒಬ್ಬ ಯಹೂದಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರೊಂದಿಗೆ ಹೇಳಿದನು: ನಮಗೆ ನಿಮ್ಮ ಬಗ್ಗೆ ಬಹಳ ಅಸೂಯೆ ಉಂಟಾಗುತ್ತದೆ. ಇದಕ್ಕೆ ಕಾರಣವೇನೆಂದು ಕೇಳಿದಾಗ ಆ ಯಹೂದಿ ಹೇಳಿದ: ಲೋಕದ ಯಾವ ವಿಷಯಕ್ಕೆ ಸಂಬಂಧಿಸಿಯೂ ಇಸ್ಲಾಮ್ ಧರ್ಮದಲ್ಲಿ ಆಜ್ಞೆಗಳು ಅಲಭ್ಯವಾಗಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಯಾವ ವಿಷಯಕ್ಕೆ ಸಂಬಂಧಿಸಿಯೂ ಆಜ್ಞೆಗಳು ಲಭಿಸುತ್ತವೆ. ವೈಯಕ್ತಿಕ ಸಂಬಂಧದಿಂದ ಹಿಡಿದು ಅಂತರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿ ಸಹ ಆಜ್ಞೆಗಳು ಅದರಲ್ಲಿ ಇವೆ. ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳಿವೆ. ಇದು ನಮ್ಮಲ್ಲಿ ಅಸೂಯೆ ಉಂಟುಮಾಡುತ್ತದೆ.

ಈ ವಿಷಯವನ್ನು ಗಮನಿಸುವಾಗ ನಮಗೆ ಸ್ಪಷ್ಟವಾಗುವುದೇನೆಂದರೆ ಕೇವಲ ಒಂದು ವಿಷಯವನ್ನು ನಮ್ಮ ಧ್ಯೇಯವಾಕ್ಯವಾಗಿ ಆಯ್ಕೆ ಮಾಡುವುದು ಸರಿಯಾಗಲಾರದು. ಆದರೆ ಪವಿತ್ರ ಖುರ್‌ಆನಿನ **''ಫಸ್ತ ಬಿ ಖುಲ್ ಖೈರಾತ್''** –ನೀವು ಒಳಿತನ್ನು ಮಾಡುವುದರಲ್ಲಿ ಸ್ಪರ್ಧಿಸಿರಿ ಎಂಬ ವಾಕ್ಯ ಅತ್ಯುತ್ತಮ ಧ್ಯೇಯವಾಕ್ಯವಾಗಿದೆ. ಇದೇರೀತಿ ''ಧರ್ಮಕ್ಕೆ ಲೌಕಿಕ ಕೆಲಸಗಳ ಮೇಲೆ ಆದ್ಯತೆ ನೀಡುವೆನು'' ಎಂಬುದು ಸಹ ಒಂದು ಉತ್ತಮ ಧ್ಯೇಯವಾಕ್ಯವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಸಹ ಈ ಧ್ಯೇಯವಾಕ್ಯದ ಕಡೆಗೆ ಸೂಚನೆ ನೀಡಲಾಗಿದೆ. ಪವಿತ್ರ ಖುರ್‌ಆನಿನ ಈ ವಚನ ನೋಡಿರಿ. **''ಬಲ್ ತುಅ್‌ಸಿರೂನಲ್ ಹಯಾತದ್ದುನ್‌ಯಾ ವಲ್ ಆಖಿರತು ಖೈರುನ್ ವ ಅಬ್‌ಖಾ''**–ನೀವು ಇಹಲೋಕ ಜೀವಿತಕ್ಕೆ ಆದ್ಯತೆ ನೀಡುತ್ತಿರುವಿರಿ. ಆದರೆ, ಪರಲೋಕ ಜೀವಿತ ಉತ್ತಮವೂ ಅನಶ್ವರವೂ ಆಗಿದೆ.

ಅವಿವೇಕಿಗಳಾದ ಜನರು ಲೌಕಿಕ ಕಾರ್ಯಗಳಿಗೆ ಧರ್ಮದ ಮೇಲೆ ಆದ್ಯತೆ ನೀಡುತ್ತಾರೆ. ಆದರೆ ವಾಸ್ತವಿಕವಾಗಿ ಪರಲೋಕ ಅಥವಾ ಧರ್ಮ ಲೌಕಿಕ ಜೀವಿತಕ್ಕಿಂತ ಉತ್ತಮವೂ ದೀರ್ಘ ಬಾಳುವುದೂ ಆಗಿದೆ ಎಂದು ಈ ವಚನ ಸೂಚಿಸುತ್ತದೆ. ನಾವು ಜುಮುಅದ ದಿನ ಈ ವಚನ ಒಳಗೊಂಡ ಸೂರತನ್ನು ಓದುತ್ತೇವೆ. ಇದಲ್ಲದೆ ಬೇರೆ ಅನೇಕ ಉಪದೇಶಗಳು ಸಹ ಪವಿತ್ರ ಖುರ್‌ಆನ್‌ನಲ್ಲಿದೆ.

ಆದುದರಿಂದ ಧ್ಯೇಯವಾಕ್ಯವಾಗಲು ಯೋಗ್ಯವಲ್ಲದ ಹಾಗೂ ನಮ್ಮ ಹೃದಯವನ್ನು ಸೆಳೆಯದೆ ಇರುವ ಉಪದೇಶ ಪವಿತ್ರ ಖುರ್‌ಆನಿನಲ್ಲಿ ಯಾವುದಿದೆ? ನಾವು ಯಾವುದರ ಕಡೆಗೆ ದೃಷ್ಟಿ ಹಾಯಿಸಿದರೂ, ಅದರ ಬಗ್ಗೆ ಕೂಲಂಕಷವಾಗಿ ಚಿಂತಿಸಿದರೆ, ಅದರ ಕಡೆಗೆ ನಮ್ಮ ಹೃದಯ ಆಕರ್ಷಿಸಲ್ಪಡುತ್ತದೆ.

ಪವಿತ್ರ ಖುರ್‌ಆನ್‌ನಿಂದ ತಿಳಿಯುವುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಆಗಮಿಸಿದ ಕಾಲ ನೆಲ–ಜಲಗಳು ಬಹಳ ಕೆಟ್ಟು ಹೋದ ಕಾಲವಾಗಿತ್ತು. ಆ ಕಾಲದಲ್ಲಿ ಇಲ್ಲದ ಕೆಡುಕುಗಳು ಯಾವುದೂ ಇರಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನೆರಳಾಗಿದ್ದಾರೆ. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲದಲ್ಲಿದ್ದ ಎಲ್ಲಾ ರೀತಿಗಳ ಕೆಡುಕುಗಳು ಮಸೀಹ್ ಮೌಊದರ ಈ ಕಾಲಘಟ್ಟದಲ್ಲಿ ಸಹ ಸಂಪೂರ್ಣವಾಗಿ ಇವೆ. ಆದುದರಿಂದ ಈಗ ಧರ್ಮದ ಆವಶ್ಯಕತೆಯೂ ಇದೆ. ಎಲ್ಲಾ ಉನ್ನತ ನೈತಿಕ ಗುಣಗಳ ಆವಶ್ಯಕತೆಯೂ ಇವೆ. ಲೋಕದಲ್ಲಿ ಎಲ್ಲಾ ಒಳಿತುಗಳು ಅಭಿವೃದ್ಧಿ ಹೊಂದಬೇಕಾದ ಆವಶ್ಯಕತೆಯೂ ಇದೆ. ಜನರ ಹೃದಯಗಳಲ್ಲಿ ಸತ್ಯ ವಿಶ್ವಾಸ ಎದ್ದು ಹೋಗಿರುವಾಗ ಸದ್ಗುಣಗಳೂ ನಾಶವಾಗಿವೆ. ಯಥಾರ್ಥವಾದ ಲೌಕಿಕ ಅಭಿವೃದ್ಧಿ ಸಹ ಇಲ್ಲವಾಗಿದೆ. ಯಾಕೆಂದರೆ, ಈಗ ಜನರು ಯಾವುದನ್ನು ಅಭಿವೃದ್ಧಿ ಎಂದು ಹೇಳುತ್ತಿರುವರೋ ಅದು ಅಹಂಭಾವದ ಒಂದು ಪ್ರದರ್ಶನ ಮಾತ್ರವಾಗಿದೆ. ವೈಯಕ್ತಿಕ ಮಟ್ಟದಲ್ಲಿ ಅಥವಾ ಅಂತರಾಷ್ಟ್ರೀಯ ಮಟ್ಟದಲ್ಲಿ ಸಹ. ಈಗ ಅಭಿವೃದ್ಧಿ ಎಂದರೆ ಸ್ವಾರ್ಥ ಲಾಭ ಮಾತ್ರವಾಗಿದೆ. ಅದನ್ನು ಲೋಕ ಅಭಿವೃದ್ಧಿ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಲೋಕದ ಒಂದು ಭಾಗ ಲಾಭ ಪಡೆಯುತ್ತಾ ಇದೆ. ಇನ್ನೊಂದು ಭಾಗದವರನ್ನು ಗುಲಾಮರನ್ನಾಗಿ ಮಾಡಲಾಗುತ್ತಿದೆ. ಅದು ರಾಜಕೀಯ ಗುಲಾಮಗಿರಿ, ಆರ್ಥಿಕ ಗುಲಾಮಗಿರಿ, ಸಾಮಾಜಿಕ ಗುಲಾಮಗಿರಿ ಆಗಿರಬಹುದು. ಯಾವುದಾದರೊಂದು ರೀತಿಯಲ್ಲಿ ಲೋಕದ ಒಂದು ಭಾಗ ಗುಲಾಮಗಿರಿಯನ್ನು ಅನುಭವಿಸುತ್ತಿದೆ. ಆ ವಿಭಾಗದ ಜನರಿಗೆ ಅಭಿವೃದ್ಧಿ ಎಂಬುದು ಲಭಿಸಿಯೇ ಇಲ್ಲ. ಅಭಿವೃದ್ಧಿ ಹೊಂದಿದವರು ಸಹ ತಮ್ಮ ಸ್ವಾರ್ಥ ಲಾಭವನ್ನು ಗಳಿಸಿ, ಅದನ್ನು ಅಭಿವೃದ್ಧಿ ಎಂದು ಹೇಳಿಕೊಳ್ಳುತ್ತಿದ್ದಾರೆ.

ಆದುದರಿಂದ, ಇಂತಹ ಕಾಲದಲ್ಲಿ ಪವಿತ್ರ ಖುರ್‌ಆನಿನ ಒಂದು ವಚನವನ್ನು ಧ್ಯೇಯವಾಗಿರಿಸಿರಿ. ಇನ್ನೊಂದನ್ನು ಬಿಟ್ಟು ಬಿಡಿರಿ ಎನ್ನುವುದು ಸರಿಯಾಗಲಾರದು. ಪವಿತ್ರ ಖುರ್‌ಆನಿನ ಪ್ರತಿಯೊಂದು ವಚನ ನಮ್ಮ ಉದ್ದೇಶ ಲಕ್ಷ್ಯವಾಗಬೇಕು. ನಮ್ಮ ಧ್ಯೇಯವಾಕ್ಯ ಸಂಪೂರ್ಣ ಪವಿತ್ರ ಖುರ್‌ಆನ್ ಆಗಿದೆ. ನಮಗೆ ಬೇಕಾದ ಇನ್ನೊಂದು ಧ್ಯೇಯವಾಕ್ಯ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ ಹಾಗೆ– **''ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್''** ಆಗಿದೆ. ಇದು ಪವಿತ್ರ ಖುರ್‌ಆನಿನ ಸಾರಾಂಶವಾಗಿದೆ. ಯಥಾರ್ಥದಲ್ಲಿ ಎಲ್ಲಾ ಉಪದೇಶಗಳು ಎಲ್ಲಾ ಉದ್ದೇಶ ಲಕ್ಷ್ಯಗಳು ಏಕದೇವ ವಿಶ್ವಾಸದೊಂದಿಗೆ ಜೋಡಿಸಲ್ಪಟ್ಟಿದೆ. ಇದೇ ರೀತಿ ಅಲ್ಲಾಹನ ದಾಸರ ಪರಸ್ಪರ ಸಂಬಂಧ ಮತ್ತು ದಾಸರು ಅಲ್ಲಾಹನೊಂದಿಗೆ ಹೊಂದುವ ಸಂಬಂಧ ಕೂಡಾ ''ತೌಹೀದ್'' (ಏಕ ದೇವ ವಿಶ್ವಾಸ) ದೊಳಗೆ ಸೇರುತ್ತದೆ.

ಇದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಂದ ಪ್ರಕಾಶವನ್ನು ಪಡೆದು ಅನೇಕ ಸಂಗತಿಗಳನ್ನು ನಮಗೆ ಕಲಿಸಿದರು ಮತ್ತು ಬಹುದೇವಾರಾಧನೆಯನ್ನು ನಮ್ಮಿಂದ ದೂರ ಸರಿಸಿದರು. ಈ ಕಾಲದಲ್ಲಿ **''ಲಾ ಇಲಾಹ ಇಲ್ಲಲ್ಲಾಹು''** ಎಂಬುದರ ಪ್ರಭೆಯನ್ನು ತೋರಿಸಿಕೊಟ್ಟವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಆಗಿದ್ದಾರೆ. ಇಸ್ಲಾಮಿನ ಸಾರಾಂಶ ಇದೇ ಆಗಿದೆ. ಪರಿಪೂರ್ಣವಾಗಿ ಏಕದೇವ ವಿಶ್ವಾಸಿಯಾದವನು ಅದನ್ನು ಪ್ರಕಟಿಸುತ್ತಾನೆ. ಉಳಿದವುಗಳು ಇದರ ವಿವರಣೆ ಮಾತ್ರ. ಅವುಗಳನ್ನು ವಿವಿಧ ಜನರಿಗೆ ವಿವಿಧ ರೀತಿಗಳಲ್ಲಿ ವಿಶದೀಕರಿಸಲಾಗಿವೆ. ಉದಾಹರಣೆಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಒಬ್ಬನಿಗೆ ಹೇಳಿದರು: ತಂದೆ

ತಾಯಂದಿರ ಸೇವೆ ಮಾಡುವುದೇ ಬಹಳ ದೊಡ್ಡ ಪುಣ್ಯ ಕಾರ್ಯ ಎಂದು. ಇನ್ನೊಬ್ಬನೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುವುದು ದೊಡ್ಡ ಪುಣ್ಯಕಾರ್ಯ ಎಂದು ಹೇಳಿದರು. ಮಗದೊಬ್ಬನಿಗೆ ತಹ್ಜ್ಜುದ್ ನಮಾಝ್ ಮಾಡುವುದು ಬಹಳ ದೊಡ್ಡ ಪುಣ್ಯಕಾರ್ಯ ಎಂದು ಹೇಳಿದರು. ಹೀಗೆ ಪ್ರತಿಯೊಬ್ಬನ ಮೂಲಭೂತ ಬಲಹೀನತೆಯನ್ನು ನಿವಾರಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಪ್ರಯತ್ನಿಸಿದರು. ಬೇರೆ ಒಳಿತುಗಳನ್ನು ಮಾಡಬೇಕಾಗಿಲ್ಲವೆಂದು ಇದರ ಅರ್ಥವಲ್ಲ.

ನೆನಪಿಡಬೇಕಾದುದೇನೆಂದರೆ ಪವಿತ್ರ ಖುರ್ಆನಿನ ಎಲ್ಲಾ ಆಜ್ಞೆಗಳು ಉತ್ತಮವೇ ಆಗಿವೆ. ಆದರೆ **"ಲಾ ಇಲಾಹ ಇಲ್ಲಲ್ಲಾಹು"** ಎಂಬುದು ಎಲ್ಲವನ್ನೂ ಆವರಿಸಿರುತ್ತದೆ. ಇದು ನಮ್ಮ ಮೂಲ ಧ್ಯೇಯವಾಕ್ಯವಾಗಿದೆ. ಇದರ ಬಗ್ಗೆ ನಾವು ಯಾವಾಗಲೂ ಗಮನ ಹರಿಸಬೇಕಾದುದು ಅತೀ ಅಗತ್ಯವಾಗಿದೆ. ತೌಹೀದ್ ಎಂದರೇನು ಅದನ್ನು ಹೇಗೆ ಸ್ಥಾಪಿಸುವುದು ಎಂದು ಚಿಂತಿಸಬೇಕು. ತೌಹೀದ್ ಎಂದರೆ ವಿಗ್ರಹಗಳನ್ನು ಆರಾಧಿಸದೆ ಇರುವುದು, ಬೇರೆ ಯಾರನ್ನಾದರೂ ಅಲ್ಲಾಹನ ಸಹಭಾಗಿ ಎಂದು ಭಾವಿಸದೆ ಇರುವುದು ಎಂಬುದಕ್ಕೆ ಸೀಮಿತವಾಗಿಲ್ಲ. ಲೋಕದ ಎಲ್ಲಾ ಕೆಲಸಗಳ ಜೊತೆ ಅದರ ಸಂಬಂಧ ಇದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಿದ್ರಿಸುವ ಮೊದಲು ಮತ್ತು ವುಝು ಮಾಡುವ ಮೊದಲು ತೌಹೀದ್ ವಚನ ಉಚ್ಚರಿಸುತ್ತಿದ್ದರು. ಮನುಷ್ಯನಿಗೆ ಯಾವುದಾದರೂ ಲೌಕಿಕ ಕೆಲಸಗಳ ಬಗ್ಗೆ ಭರವಸೆ ಹುಟ್ಟುವಾಗ ಅವನಲ್ಲಿ ಶಿರ್ಕ್ ತಲೆ ದೋರುತ್ತದೆ. ಆಗ ಅವನು ಏಕದೇವ ವಿಶ್ವಾಸಿ ಎನ್ನುವುದು ಸುಳ್ಳಾಗುತ್ತದೆ. ಏಕೆಂದರೆ ತೌಹೀದ್ ಎಂದರೆ ಅಲ್ಲಾಹನ ಮೇಲೆ ಮಾತ್ರ ಭರವಸೆ ಇಡುವುದಾಗಿದೆ. ಮನುಷ್ಯನು ಯಾವುದೇ ಕೆಲಸ ಮಾಡುವಾಗಲೂ, ಅದು ಲೌಕಿಕವಿರಲಿ ಧಾರ್ಮಿಕವಿರಲಿ ಏಕ ದೇವನಾದ ಅಲ್ಲಾಹನ ಕಡೆಗೆ ದೃಷ್ಟಿ ಇರಿಸಬೇಕು. ಎಲ್ಲಾ ಒಳ್ಳೆಯ ಧ್ಯೇಯವಾಕ್ಯಗಳು ಉತ್ತಮವೇ ಆಗಿವೆ. ಆದರೆ ಏಕದೇವ ವಿಶ್ವಾಸಿ ಆಗಬೇಕಾದರೆ, ಅವನಿಗೆ ಅಲ್ಲಾಹನ ಹೊರತು ಬೇರೆ ಎಲ್ಲಾ ವಸ್ತುಗಳು ನಗಣ್ಯವಾಗಬೇಕು. ಆದುದರಿಂದ, ವಾಸ್ತವಿಕ ಧ್ಯೇಯ ವಚನ **"ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್"** ಎಂಬುದೇ ಆಗಿದೆ. ಅದರಲ್ಲಿ ಎಲ್ಲಾ ಒಳಿತುಗಳು ಜಮಾಯಿಸುತ್ತವೆ. ತೌಹೀದನ್ನು ಅರ್ಥ ಮಾಡುವಲ್ಲಿ ನಮಗುಂಟಾಗುವ ಪ್ರಯಾಸಗಳು ಸಹ ಅದರಿಂದ ನಿವಾರಣೆ ಆಗುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಮಗೆ ಮಾದರಿಯಾಗಿದ್ದಾರೆ. ಅವರ ಬಗ್ಗೆ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದರು: **"ಕಾನ ಖುಲ್‌ಖುಹುಲ್ ಖುರ್ಆನ"** ಅವರ ನಡೆವಳಿಕೆ ಪವಿತ್ರ ಖುರ್ಆನೇ ಆಗಿತ್ತು. ಈ ಮಾತಿನಲ್ಲಿ ನಮಗೆ ಉನ್ನತ ಆದರ್ಶ ಲಭಿಸಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅರ್ಥ ಮಾಡಿಕೊಂಡವನು ಅಲ್ಲಾಹನನ್ನು ಅರ್ಥ ಮಾಡಿಕೊಂಡನು. ಯಾರು ಅಲ್ಲಾಹನನ್ನು ಅರ್ಥ ಮಾಡಿಕೊಂಡನೋ ಅವನು ಎಲ್ಲವನ್ನೂ ಅರ್ಥ ಮಾಡಿಕೊಂಡನು. ಶಿರ್ಕ್(ಬಹುದೇವಾರಾಧನೆ) ಎಲ್ಲಾ ಕೆಡುಕುಗಳ, ಪಾಪಗಳ ಬೇರಾಗಿದೆ. ತೌಹೀದ್ ಹೊಂದಿದವನು ಉನ್ನತ ಸ್ವಭಾವಗುಣಗಳನ್ನೂ ಜ್ಞಾನವನ್ನೂ ನಾಗರೀಕತೆಯನ್ನೂ ರಾಜಕಾರಣ ಮೊದಲಾದವುಗಳಲ್ಲಿ ನೈಪುಣ್ಯತೆಯನ್ನೂ ಗಳಿಸಿದವನಾಗುತ್ತಾನೆ. ಏಕೆಂದರೆ ಅಲ್ಲಾಹನ ಪ್ರಕಾಶ ಒಂದು ವಿಷಹಾರಿ ವಸ್ತುವಾಗಿದೆ. ಅದರಲ್ಲಿ ಎಲ್ಲಾ ರೋಗಗಳಿಗೂ ಚಿಕಿತ್ಸೆಯಿದೆ. ಆದುದರಿಂದ ನಮ್ಮ ಧ್ಯೇಯವಾಕ್ಯ ಸ್ವತಃ ಅಲ್ಲಾಹನೇ ನಿಶ್ಚಯಿಸಿದ **'ಲಾ ಇಲಾಹ ಇಲ್ಲಲ್ಲಾಹ್'** ಆಗಿದೆ. ಉಳಿದ ವಿವರಣೆಗಳು ಉಪದೇಶಗಳ ರೂಪದಲ್ಲಿವೆ. ಈ ಕಾಲದಲ್ಲಿ ದಜ್ಜಾಲನು ತನ್ನ ಎಲ್ಲಾ ಶಕ್ತಿಗಳೊಂದಿಗೆ ಲೋಕದಲ್ಲಿ ಪ್ರಕಟವಾಗಿರುವನು. ಅವನ ಉದ್ದೇಶ ಲೌಕಿಕ ಕಾರ್ಯಗಳಿಗೆ ಧರ್ಮದ ಮೇಲೆ ಆದ್ಯತೆ ನೀಡಬೇಕು ಎಂದಾಗಿದೆ. ಆದುದರಿಂದ ನಾವು ಧರ್ಮಕ್ಕೆ ಲೌಕಿಕ ಕೆಲಸಗಳ ಮೇಲೆ ಆದ್ಯತೆ ನೀಡುವೆವು ಎಂಬ ಧ್ಯೇಯವಾಕ್ಯ ಘೋಷಿಸಬೇಕಾಗಿದೆ. ಇದೇ ಕಾರಣದಿಂದ ಬೈಅತ್ ಶರ್ತಗಳಲ್ಲಿ ಈ ವಾಕ್ಯವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸೇರಿಸಿದ್ದಾರೆ. ಇದರ ಅರ್ಥ ನಾವು ನಮ್ಮ ಮೇಲೆ ಇಸ್ಲಾಮಿನ ಆಜ್ಞೆಗಳನ್ನು ಜಾರಿಗೊಳಿಸುವೆವು. ವಿರೋಧಿಗಳಿಗೆ ಉತ್ತರ ನೀಡುವಾಗ ಇಸ್ಲಾಮಿನ ಸುಂದರ ಮುಖವನ್ನು ತೋರಿಸಿ ಕೊಡುವೆವು. ಏಕೆಂದರೆ ನಾವು **"ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್"** ಎಂಬ ಧ್ಯೇಯವನ್ನು ಸ್ಥಾಪಿಸುವವರಾಗಿರುವೆವು. ನಾವು ಈ ಉದ್ದೇಶದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿರುವೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರಿಗೆ ಹೀಗೆ ಇಲ್‌ಹಾಮ್ ಆಗಿತ್ತು. **"ಖುಝು ತೌಹೀದ ತೌಹೀದ ಯಾ ಅಬ್‌ನಾಉಲ್ ಫಾರಿಸ್."**– ಓ ಫಾರಿಸ್ ಸಂತತಿಗಳೇ ತೌಹೀದನ್ನು ಬಲಿಷ್ಠವಾಗಿ ಹಿಡಿದುಕೊಳ್ಳಿರಿ.

ಅಬ್‌ನಾಉಲ್ ಫಾರಿಸ್ ಎಂದು ಹೇಳಿದುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬವನ್ನು ಉದ್ದೇಶಿಸಿ ಮಾತ್ರವಲ್ಲ. ಬದಲಾಗಿ ಅಹ್ಮದಿಯಾ ಜಮಾಅತ್ ಪೂರ್ಣವಾಗಿ ಅವರ ಕುಟುಂಬಕ್ಕೆ ಆಧ್ಯಾತ್ಮಿಕವಾಗಿ ಸೇರಿದೆ. ಈ ಆಜ್ಞೆ ಜಮಾಅತ್‌ಗೆ ನೀಡಲಾಗಿದೆ. ಕಷ್ಟಕಾಲದಲ್ಲಿ ಮನುಷ್ಯ ಒಂದನ್ನು ಬಿಗಿಯಾಗಿ ಹಿಡಿದು ಕೊಳ್ಳುವ ಹಾಗೆ ಈ ಕಷ್ಟದ ಕಾಲದಲ್ಲಿ ಜಮಾಅತ್ ತೌಹೀದನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕಾಗಿದೆ. ಅದರೊಳಗೆ ಎಲ್ಲವೂ ಸೇರಿದೆ. ನಮ್ಮ ಜಮಾಅತ್ **'ಲಾ ಇಲಾಹ ಇಲ್ಲಲ್ಲಾಹ್'** ಎಂಬ ಧ್ಯೇಯವಾಕ್ಯವನ್ನು ತಮ್ಮ ಮುಂದಿರಿಸಬೇಕು. ಇಂದು ಶಿರ್ಕ್‌ನೊಂದಿಗೆ ನಾಸ್ತಿಕ ವಾದ ಕೂಡ ಬಹಳ ವ್ಯಾಪಕವಾಗಿ ಹಬ್ಬುತ್ತಾ ಇದೆ. ನಾಸ್ತಿಕ ವಾದ ಒಂದು ರೀತಿಯ ಶಿರ್ಕ್ ಆಗಿದೆ. ನಾವು ಒಂದು ಧ್ಯೇಯವಾಕ್ಯಕ್ಕೆ ಮಾತ್ರ ನಮ್ಮನ್ನು ಸೀಮಿತಗೊಳಿಸಿ ನಮ್ಮ ಇಹ ಪರಲೋಕವನ್ನು ಸುಧಾರಿಸಲಾರೆವು. ಮಾನವ ಸೇವೆ ಮಾಡುವ ನೆವನದಿಂದ ನಾವು ನಮ್ಮ ನಮಾಝ್‌ಗಳನ್ನು ಹಾಗೂ ಆರಾಧನೆಗಳನ್ನು ಬಿಡಲಾರೆವು. ಯಾರು ಹಾಗೆ ಮಾಡುತ್ತಾರೋ ಮತ್ತು ಯಾರು ಹಾಗೆ ಹೇಳುತ್ತಾರೋ ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಯಾವ ಸಂಬಂಧವೂ ಇಲ್ಲ. ನಾವು ನಮ್ಮ ನಿಜವಾದ ಉದ್ದೇಶಲಕ್ಷ್ಯವನ್ನು ನಮ್ಮ ಮುಂದಿರಿಸಿಕೊಂಡು ಎಲ್ಲಾ ರೀತಿಯ ಲೌಕಿಕ ಮತ್ತು ಧಾರ್ಮಿಕ ಬಹುಮಾನಗಳನ್ನು ಗಳಿಸುವವನಾಗಬೇಕು. ಅಲ್ಲಾಹನು ನಮಗೆಲ್ಲರಿಗೂ ಈ ಸತ್ಯಾಂಶವನ್ನು ಮನವರಿಕೆ ಮಾಡಿಕೊಳ್ಳುವ ಭಾಗ್ಯವನ್ನು ದಯಪಾಲಿಸಲಿ– **ಆಮೀನ್.**

*Friday Sermon delivered by Hadrath Khaleefathul Masih Al Khamis* (atba)
*at Masjid Baithul Futhuh, London on 09-05-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

***Published By:*** Kannada Isha'at Team, *Ahmadiyya Muslim Jama`at, Karnataka*

*Email*: **khutuba.kannada@gmail.com**